# ವಿದ್ಯಾರ್ಥಿಗಳೇ ಗಮನಿಸಿ



**ಪ್ರೀ**ತಿಯ ವಿದ್ಯಾರ್ಥಿಗಳೇ, ನಿಮ್ಮ ಪರೀಕ್ಷೆಗೆ ಇನ್ನು ಒಂದು ಅಥವಾ ಎರಡು ತಿಂಗಳುಗಳು ಮಾತ್ರ ಉಳಿದಿವೆ. ನೀವು ಈಗಾಗಲೇ ಗಾಢ ಅಧ್ಯಯನದಲ್ಲಿ ತೊಡಗಿದ್ದೀರೆಂದು ಆಶಿಸುತ್ತೇವೆ. ಆದರೆ ಪರೀಕ್ಷೆಯ ಸಮಯದಲ್ಲಿ ನೀವು ಗಮನಿಸಬೇಕಾದ ಕೆಲವು ವಿಷಯಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯುತ್ತಿದ್ದೇವೆ. ಅವು ಹೀಗಿವೆ:

**1** ಇನ್ನು ಮುಂದೆ ನೀವು ನಿಮ್ಮ ಅಧ್ಯಯನವನ್ನು ಬಹಳ ಶಿಸ್ತುಬದ್ಧವಾಗಿ ಮಾಡಬೇಕು. ಅದಕ್ಕಾಗಿ ಬೆಳಗ್ಗೆ, ಸಾಯಂಕಾಲ ನಿಗದಿತ ಸಮಯದಲ್ಲಿ ತಪ್ಪದೆ ಓದಬೇಕು. ನಿಮ್ಮ ಓದುವ ವಿಧಾನವನ್ನೂ ಉತ್ತಮಪಡಿಸಿಕೊಳ್ಳಬೇಕು.

**2** ಉರು ಹೊಡೆಯುವುದಕ್ಕಿಂತ, ವಿಷಯವನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಜಾಸ್ತಿ ಓದಿ, ಮೆದುಳನ್ನು ಬಿಸಿ ಮಾಡಿಕೊಳ್ಳುವುದಕ್ಕಿಂತ, ಅರ್ಥ ಮಾಡಿಕೊಳ್ಳುವ ಕಡೆಗೆ ಗಮನ ವಿಟ್ಟು ಓದಬೇಕು.

**3** ಈಗ ನಿಮ್ಮ ಸಮಯ ಅಮೂಲ್ಯವಾದುದು. ಆದ್ದರಿಂದ ಕಷ್ಟವಿರುವ ವಿಷಯಗಳಿಗೆ ಹೆಚ್ಚು ಗಮನಕೊಡಿ. ಸುಲಭವೆನಿಸುವ ವಿಷಯಗಳ ಬಗ್ಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳಿ.

**4** ಮುಖ್ಯವಾದ ಸಂಗತಿಗಳನ್ನು ಪ್ರತ್ಯೇಕವಾಗಿ ಬರೆದುಕೊಳ್ಳಿ. ನೆನಪಿಡಬೇಕಾದ ವಿಷಯಗಳನ್ನು ಮತ್ತೆ ಮತ್ತೆ ಬರೆದು ಅಭ್ಯಾಸ ಮಾಡಿ. ಗಣಿತದ ಲೆಕ್ಕಗಳನ್ನು ಬೇರೆ ಬೇರೆ ವಿಧಾನದಲ್ಲಿ ಮತ್ತೆ ಮತ್ತೆ ಮಾಡಿ. ಹಾಗೆಯೇ ನೀವು ಬಿಡಿಸಬೇಕಾದ ಚಿತ್ರಗಳನ್ನು ಎರಡು ಮೂರು ಸಲ ಬಿಡಿಸಿ ಅಭ್ಯಾಸ ಮಾಡುವ ಮೂಲಕ, ಅವುಗಳನ್ನು ಬಹುಬೇಗ ಬಿಡಿಸುವಂತೆ ಪರಿಣತಿ ಹೊಂದಿರಿ.

**5** ನಿಮ್ಮ ದಿನನಿತ್ಯದ ನಿದ್ರೆಯಲ್ಲಿ ಕಡಿಮೆ ಮಾಡಿಕೊಳ್ಳಬೇಡಿ. ಆಹಾರ – ಆಟ – ವಿಹಾರ – ವಿನೋದ: ಯಾವುದರಲ್ಲಿಯೂ ಕಡಿಮೆ ಮಾಡಿಕೊಳ್ಳಬೇಡಿ. ಸ್ನೇಹಿತರೊಡನೆ ಒಡನಾಡಿ, ಮನೆಯವರ ಜೊತೆಗೆ ಆನಂದದಿಂದ ವರ್ತಿಸಿರಿ.

**6** ಪರೀಕ್ಷೆಯ ಸಲುವಾಗಿ ಸ್ವಲ್ಪ ಭಯ ಇದ್ದೇ ಇರುತ್ತದೆ. ನೀವು ಚೆನ್ನಾಗಿ ಓದಿ, ಓದಿದ್ದರಲ್ಲಿ ಆತ್ಮವಿಶ್ವಾಸ ಬೆಳೆಸಿಕೊಂಡರೆ, ಭಯ ಕ್ರಮೇಣ ಕಡಮೆಯಾಗುತ್ತದೆ. ಆದರೆ ಸುಮ್ಮಸುಮ್ಮನೆ ಚಿಕ್ಕಚಿಕ್ಕ ವಿಷಯಗಳಿಗೆ ಉದ್ವೇಗ ಹೊಂದಬೇಡಿ. 'ನನಗದು ಬರುವುದಿಲ್ಲ', 'ಇದು ಬರುವುದಿಲ್ಲ' ಎಂಬ ಭ್ರಮೆಯ ಆಲೋಚನೆಗಳನ್ನು ದೂರವಿಡಿ.

**7** ಗಡಿಬಿಡಿಯಲ್ಲಿ ಏನನ್ನೂ ಮಾಡಬೇಡಿ. ನಿಗದಿತ ಕಾಲದಲ್ಲಿ ಸಾವಧಾನವಾಗಿ ಅಧ್ಯಯನ ಮಾಡಿ. ನೀವು ಎಷ್ಟು ಸಲ ವಿಷಯ ತಿರುವಿಹಾಕಿದಿರಿ ಎನ್ನುವುದು ಮುಖ್ಯವಲ್ಲ, ಎಷ್ಟು ಚೆನ್ನಾಗಿ ವಿಷಯವನ್ನು ಅರ್ಥ ಮಾಡಿಕೊಳ್ಳುತ್ತೀರಿ ಎನ್ನುವುದು ಮುಖ್ಯ.

**8** ಬೇರೆಯವರೊಡನೆ ಹೋಲಿಕೆ ಮಾಡಿಕೊಳ್ಳುವುದು ಸರಿಯಲ್ಲ. ಅವರಲ್ಲಿ ಇಲ್ಲದ ಸಾಮರ್ಥ್ಯ ನಿಮ್ಮಲ್ಲಿ ಇರಬಹುದು. ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಿ. ನಿಮಗೆ ಕಷ್ಟವೆನಿಸಿದ ವಿಷಯಗಳಿಗೆ ಹೆಚ್ಚು ಗಮನಕೊಟ್ಟು ಅಭ್ಯಾಸ ಮಾಡಿ.

**9** ಕೆಲಸದಲ್ಲಿ ಪ್ರೀತಿ ಇದ್ದರೆ ಏಕಾಗ್ರತೆ ಬರುತ್ತದೆ. ಹೀಗಾಗಿ ಓದಿನಲ್ಲಿ ನಿಮಗೆ ಪ್ರೀತಿ ಇರಲಿ. ಆನಂದದಿಂದ ಓದಿ, ಇಚ್ಛೆಪಟ್ಟು ಓದಿ, ಸ್ವಯಂಸ್ಫೂರ್ತಿಯಿಂದ ಓದಿ, ಕುತೂಹಲದಿಂದ ಓದಿ, ಆಸಕ್ತಿಪಟ್ಟು ಓದಿ. ಕೇವಲ ಪರೀಕ್ಷೆಗಾಗಿ ಓದದೆ, ಜ್ಞಾನಕ್ಕಾಗಿ ಓದಿ. ಆಗ ಏಕಾಗ್ರತೆ ಖಂಡಿತ ಸಿದ್ಧಿಸುತ್ತದೆ.

**10** ನಿಮಗೇನಾದರೂ ಸಮಸ್ಯೆಯಿದ್ದರೆ, ನಿಮ್ಮ ಹಿರಿಯರಿಂದ ಪರಿಹಾರ ಪಡೆಯಿರಿ. ಕಷ್ಟವಿದ್ದಾಗ ಅದನ್ನು ಬೇರೆಯವರ ಜೊತೆಗೆ ಹಂಚಿಕೊಳ್ಳುವುದು ಒಳ್ಳೆಯದು. ಇದರಿಂದ ಮನಸ್ಸು ಹಗುರವಾಗುತ್ತದೆ, ಪರಿಹಾರವೂ ಸಿಕ್ಕುತ್ತದೆ. **ನಿಮಗೆಲ್ಲರಿಗೂ ಪರೀಕ್ಷೆಗಳಲ್ಲಿ ಭಾರೀ ಯಶಸ್ಸು ದೊರೆಯಲಿ !**




# ಬೃಹದಾರಣ್ಯಕೋಪನಿಷತ್

ಗಂಗಾಧರ ವಿ. ಭಟ್

ಪ್ರಸಿದ್ಧವಾದ ಹತ್ತು ಉಪನಿಷತ್ತುಗಳಲ್ಲಿ ಬೃಹದಾರಣ್ಯಕ ಉಪನಿಷತ್ ಕೂಡ ಒಂದು. ಶುಕ್ಲ ಯಜುರ್ವೇದದ ವಾಜಸನೇಯೀ ಶಾಖೆಯ ಕಾಣ್ವ ಹಾಗೂ ಮಾಧ್ಯಂದಿನ ಬ್ರಾಹ್ಮಣಗಳಲ್ಲಿ ಈ ಉಪನಿಷತ್ತು ಬರುತ್ತದೆ. **'ಉಷಾ ವೈ ಅಶ್ವಸ್ಯ ಶಿರಃ'** ಎಂದು ಪ್ರಾರಂಭವಾಗಿ **'ಬ್ರಹ್ಮಣೇ ನಮಃ'** ಎಂದು ಮುಕ್ತಾಯವಾಗುವ ವೇದಭಾಗವನ್ನು 'ಬೃಹದಾರಣ್ಯಕೋಪನಿಷತ್' ಎನ್ನುತ್ತಾರೆ. ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು, ಉಪನಿಷತ್ತುಗಳು ಎಂದು ವೇದರಾಶಿಗೆ ನಾಲ್ಕು ಮಜಲುಗಳಿವೆ. ಬೃಹದಾರಣ್ಯಕೋಪನಿಷತ್ತು, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು – ಈ ಮೂರೂ ಮಜಲುಗಳ ಲಕ್ಷಣಗಳನ್ನು ಹೊಂದಿದ ಸಮರಸದ ಶ್ರುತಿಯಾಗಿದೆ.

**ಉಪನಿಷತ್ತುಗಳಲ್ಲೆಲ್ಲಾ ಅರ್ಥಬಾಹುಳ್ಯದಿಂದಲೂ, ಗಾತ್ರದಿಂದಲೂ ಬೃಹತ್ತಾಗಿರುವುದೇ ಬೃಹದಾರಣ್ಯಕ ಉಪನಿಷತ್ತು. ಗಂಭೀರವೂ ಗಹನವೂ ಆಗಿರುವ ಇದರ ವಿಷಯವ್ಯಾಪ್ತಿಯನ್ನು ನಿರ್ದುಷ್ಟವಾಗಿ ತಿಳಿಸಿಕೊಟ್ಟಿರುವ ಲೇಖಕರು, ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆಯ ತರ್ಕಶಾಸ್ತ್ರ ವಿಭಾಗದ ಉಪ ಪ್ರಾಧ್ಯಾಪಕ ರಾಗಿದ್ದಾರೆ. ಇವರು ಪ್ರಸಿದ್ಧ ಲೇಖಕರು ಮತ್ತು ವಾಗ್ಮಿಗಳು.**

ಸಂಸಾರ ಸಾಗರದಿಂದ ಪಾರಾಗಲು ಬಯಸುವ ಮುಮುಕ್ಷುಗಳಿಗೆ ಇಲ್ಲಿ ನಿವೃತ್ತಿ ಮಾರ್ಗದ ಉಪಾಯವನ್ನು ಬಿತ್ತರಿಸಲಾಗಿದೆ. ಬ್ರಹ್ಮ ಮತ್ತು ಆತ್ಮ ಒಂದೇ ಒಂದು, ಬೇರೆಯಲ್ಲ ಎಂಬ ಅದ್ವೈತ ಪ್ರಜ್ಞೆಯೊಂದೇ ಸಂಸಾರದಿಂದ ದೂರವಾಗುವ ಉಪಾಯ. ಇಂತಹ ಅಪೂರ್ವವಾದ ಬ್ರಹ್ಮವಿದ್ಯೆಯನ್ನು 'ಉಪನಿಷತ್' ಎನ್ನುತ್ತಾರೆ. ಬ್ರಹ್ಮವಿದ್ಯೆಯಲ್ಲಿ ತಲ್ಲೀನರಾದವರ, ಸುಖದುಃಖಚಕ್ರರೂಪವಾದ ಸಂಸಾರದ ಬೇರನ್ನು ಸಡಿಲಿಸಿ ನಿರ್ನಾಮಗೊಳಿಸುವುದರಿಂದ ಈ ವಿದ್ಯೆಗೆ 'ಉಪನಿಷತ್ತು' ಎಂಬುದು ಅನ್ವರ್ಥವಾದ ಹೆಸರು. ಈ ಉಪನಿಷತ್ತಿನಲ್ಲಿ ಆರು ಅಧ್ಯಾಯಗಳಿವೆ. ಇದನ್ನು ಅರಣ್ಯದಲ್ಲಿ ಅಧ್ಯಯನ ಮಾಡಿದ್ದರಿಂದ 'ಆರಣ್ಯಕ' ಎನ್ನುತ್ತಾರೆ. ಗಾತ್ರದಲ್ಲಿಯೂ, ವಿಷಯವ್ಯಾಪ್ತಿಯಲ್ಲಿಯೂ, ವಿಷಯ ಗಹನತೆಯಲ್ಲಿಯೂ ವಿಶಾಲವಾದ್ದರಿಂದ ಈ ಉಪನಿಷತ್ತಿಗೆ 'ಬೃಹತ್' ಎಂಬ ಹೆಗ್ಗಳಿಕೆ. ಕರ್ಮಕಾಂಡದ ಸಂಬಂಧವಿರುವುದರಿಂದ ಇದು 'ಬ್ರಾಹ್ಮಣ' ವೂ ಹೌದು. ಆದ್ದರಿಂದ ಈ ಉಪನಿಷತ್ತನ್ನು 'ಬೃಹದಾರಣ್ಯಕೋಪನಿಷತ್' ಎಂದು ಕರೆಯಲಾಗಿದೆ. ಇಷ್ಟಪ್ರಾಪ್ತಿಯ ಉಪಾಯದಂತೆಯೇ ಅನಿಷ್ಟ ಪರಿಹಾರದ ಉಪಾಯವನ್ನು ತಿಳಿಸುವುದೂ ಇದರ ಉದ್ದೇಶ. ಅದರಲ್ಲಿಯೂ, ಅದೃಷ್ಟವಾದ ಮೃತ್ಯು ಮತ್ತು ಅಮರತೆಯ ಮೂಲಾನ್ವೇಷಣೆಯೇ ಈ ಉಪನಿಷತ್ತಿನ ವಿಶೇಷ.

ಜೀವಿಯು ಗತಿಸಿದ ನಂತರ ಆತ್ಮನಿರುವನೋ ಇಲ್ಲವೋ ಎಂದು ಗಹನವಾಗಿ ವಿಚಾರಿಸಿ, ಸತ್ತ ನಂತರವೂ ಆತ್ಮನಿರುವನೆಂಬ ನಿರ್ಣಯ ಇಲ್ಲಿದೆ. ಮರುಹುಟ್ಟು ಹಾಗೂ ಮುಕ್ತಿಗೆ ಅವರವರ ಕರ್ಮವೇ ಕಾರಣ. 'ಆತ್ಮನು ವಿಜ್ಞಾನಮಯ' ಎಂಬ ಸತ್ಯಕಾಮನ ಉದ್ಘೋಷವನ್ನು ಕಾಣುವುದು ಈ ಉಪನಿಷತ್ತಿನಲ್ಲಿಯೇ.

ಸತ್ತ ಮೇಲೂ ಆತ್ಮನಿಗೆ ದೇಹಾಂತರ ಸಂಬಂಧವಿದೆ. ಹೀಗಾಗಿ ಅದಕ್ಕೆ ಸಂಬಂಧಿಸಿದ ಇಷ್ಟಪ್ರಾಪ್ತಿಯ ಉಪಾಯವೇನು, ಅನಿಷ್ಟ ನಿವಾರಣೆಯ ಮಾರ್ಗವೇನು? – ಈ ಅಂಶವನ್ನು ವಿಶೇಷವಾಗಿ ತಿಳಿಸಲು ಕರ್ಮಕಾಂಡ ಪ್ರವೃತ್ತವಾಗಿದೆ. ಇಷ್ಟಪ್ರಾಪ್ತಿ, ಅನಿಷ್ಟ ನಿವೃತ್ತಿಯ ಬಯಕೆಗೆ ಕಾರಣ ಆತ್ಮನ ಬಗ್ಗೆ ಇರುವ ಅಜ್ಞಾನ ಮತ್ತು ಆತ್ಮನೇ ಕರ್ತಾ, ಭೋಕ್ತಾ ಎಂಬ ಅಭಿಮಾನ. ಈ ಅಭಿಮಾನ ಬ್ರಹ್ಮಾತ್ಮ ಸ್ವರೂಪದ ವಿಜ್ಞಾನದಿಂದಲ್ಲದೇ ದೂರಾಗದು. ಈ ಅಭಿಮಾನ ದೂರಾಗುವವರೆಗೂ ಜೀವಿಗಳು ಕರ್ಮದಲ್ಲಿ ತೊಡಗಿರುತ್ತಾರೆ. ಇದನ್ನೇ 'ಅಧರ್ಮ' ಎನ್ನುವರು. ಈ ಕರ್ಮವೇ ಅನಿಷ್ಟಕ್ಕೆ ಕಾರಣ. ಅನಿಷ್ಟವು 'ದೃಷ್ಟ' ಮತ್ತು 'ಅದೃಷ್ಟ' ವೆಂದು ಇಬ್ಬಗೆ. ಹಾಗೂ ಕರ್ಮಕ್ಕೆ ವಾಕ್ ಕಾಯ ಮನಸ್ಸೆಂಬ ಕರಣತ್ರಯವೇ ಕಾರಣ. ಕರ್ಮದ ಫಲಿತಾಂಶ ರಾಗ ಅಥವಾ ದ್ವೇಷ. ಈ ದೋಷಕ್ಕೆ ಪ್ರೇರಣೆಯನ್ನು ಕರ್ಮವೇ ನೀಡುತ್ತದೆ. ಇದರಿಂದ ಶಾಸ್ತ್ರದಲ್ಲಿ ವಿಧಿಸಿದ್ದನ್ನು, ನಿಷೇಧಿಸಿದ್ದನ್ನು ಅತಿಕ್ರಮಿಸಿ ಜೀವಿಗಳು ನಡೆದುಕೊಳ್ಳುತ್ತಾರೆ. ಏಕೆಂದರೆ ಸ್ವಾಭಾವಿಕವಾದ ಈ ದೋಷವೆಂಬುದು ಅತ್ಯಂತ ಬಲಿಷ್ಠವಾದುದು. ಈ ದೋಷದಿಂದಲೇ ಜೀವಿಯ ಅವನತಿಯಾಗುವುದು.

ಬ್ರಹ್ಮದಿಂದ ಸ್ತಂಬಪರ್ಯಂತ ಮರುಹುಟ್ಟುವ ಸಂಸಾರಜಾಲವೆಂಬುದು ಅನಿವಾರ್ಯ. ಕೆಲವೊಮ್ಮೆ ಶಾಸ್ತ್ರದಿಂದ ಪಡೆದ ಸಂಸ್ಕಾರವು ಬಲಿಷ್ಠವಾಗಿರುತ್ತದೆ. ಈ ಸಂಸ್ಕಾರದ ಬಲದಿಂದ ವಾಕ್ಕಾಯ ಮನಸ್ಸನ್ನು ಶಾಸ್ತ್ರವಿಹಿತ ಮಾರ್ಗದಲ್ಲಿ ಬಳಸಿ ಇಷ್ಟಸಾಧನವನ್ನು ಪಡೆಯುತ್ತೇವೆ, ಅನಿಷ್ಟಸಾಧನವನ್ನು ತೊರೆಯುತ್ತೇವೆ. ಇದನ್ನೇ 'ಧರ್ಮ' ಎನ್ನುವುದು. 'ಜ್ಞಾನಪೂರ್ವಕ ಧರ್ಮ', 'ಕೇವಲ ಧರ್ಮ' ಎಂದು ಧರ್ಮದಲ್ಲಿ ಎರಡು ವಿಧ. 'ಕೇವಲ ಕರ್ಮ' ವು ಧರ್ಮರೂಪವಾಗಿದ್ದರೂ ಪಿತೃಲೋಕಾದಿ ಪ್ರಾಪ್ತಿಯಲ್ಲಿಯೇ ಪರ್ಯವಸಾನವಾಗುತ್ತದೆ. 'ಜ್ಞಾನಪೂರ್ವಕ ಕರ್ಮ' ವು ದೇವಲೋಕಾದಿ ಬ್ರಹ್ಮಲೋಕ ಪ್ರಾಪ್ತಿಗೆ ಕಾರಣವಾಗುತ್ತದೆ. ಆದ್ದರಿಂದಲೇ **ಆತ್ಮಯಾಜೀ ಶ್ರೇಯಾನ್**

**ದೇವಯಾಜಿನಃ** – "ಆತ್ಮಯಾಗ ಮಾಡುವವನು ದೇವಯಾಗ ಮಾಡುವವನಿಗಿಂತಲೂ ಶ್ರೇಷ್ಠ" ಎಂದು ಹೇಳಿದ್ದಾರೆ. ಅಂದರೆ ಜ್ಞಾನಪೂರ್ವಕ ಕರ್ಮವು ಜ್ಞಾನರಹಿತ ಯಾಂತ್ರಿಕ ಕರ್ಮಕ್ಕಿಂತ ಮಿಗಿಲಾದುದು.

ಧರ್ಮ ಮತ್ತು ಅಧರ್ಮಗಳ ಫಲ ಮನುಷ್ಯತ್ವಪ್ರಾಪ್ತಿ ಯಾದ್ದರಿಂದ ಇವೆರಡೂ ಸಮಾನವೇ ಎಂಬುದು ವೇದಾಂತಿಗಳ ಅಭಿಪ್ರಾಯ. ಇದರಿಂದ ಉಂಟಾಗುವ ಸ್ವಾಭಾವಿಕವಾದ ಅವಿದ್ಯೆಯ ಫಲಿತಾಂಶವೇ ಸಂಸಾರದ ಅವಿರತಗತಿ. ಸಂಸಾರ ನಾಮ–ರೂಪ – ಕರ್ಮಗಳನ್ನು ಅವಲಂಬಿಸಿದೆ. ಸಾಧ್ಯ–ಸಾಧನರೂಪವಾಗಿ ಪರಿ ವರ್ತನಾಶೀಲವಾದದ್ದು ಈ ಜಗತ್ತು. ನಾಮ–ರೂಪ–ಕರ್ಮಗಳು ಸೃಷ್ಟಿಯಲ್ಲಿ ಅವ್ಯಾಕೃತವಾಗಿರುತ್ತವೆ. ವೃಕ್ಷಬೀಜನ್ಯಾಯದಂತೆ ಜನನ ಮರಣಗಳ ಅನುವೃತ್ತಿಯೇ ಸಂಸಾರ. ಸಂಸಾರವೆಂದರೆ ಆತ್ಮನಲ್ಲಿ ಕ್ರಿಯೆ–ಕಾರಕ–ಫಲಗಳ ಅಧ್ಯಾರೋಪ. ಅಧ್ಯಾರೋಪವೆಂದರೆ 'ಇಲ್ಲದ್ದನ್ನು ಇದೆ' ಎಂದು ಅರಿಯುವುದು, ಭ್ರಮೆ. ಈ ಸಂಸಾರವೆಂಬ ಅನರ್ಥವು ಅನಾದಿಯೂ ಅನಂತವೂ ಆಗಿದೆ. ಇದನ್ನು ಪರಿಭಾವಿಸಿ ಸಂಸಾರದಲ್ಲಿ ವಿರಕ್ತರಾದವರು, ಅವಿದ್ಯಾ ನಿವೃತ್ತಿಗಾಗಿ, ಅದಕ್ಕೆ ವಿರುದ್ಧವಾದ ಬ್ರಹ್ಮವಿದ್ಯಾ ಪ್ರಾಪ್ತಿಯನ್ನು ಹೇಗೆ ಮಾಡಿಕೊಳ್ಳಬೇಕು ಎಂಬ ವಿಧಾನವನ್ನು ವಿವರಿಸುವ ಉಪನಿಷತ್ತೇ ಬೃಹದಾರಣ್ಯಕೋಪನಿಷತ್ತು.

ಯಾಗಗಳಲ್ಲಿ ಅಶ್ವಮೇಧಯಾಗ ಪ್ರಮುಖ. **ಸರ್ವೇಷಾಂ ಕರ್ಮಣಾಂ ಪರಮಶ್ವಮೇಧಃ** – ಅಶ್ವಮೇಧದಲ್ಲಿ ಯಾರಿಗೆ ಅಧಿಕಾರ ವಿಲ್ಲವೋ ಅವರಿಗೆ ಅಶ್ವಮೇಧ ಕರ್ಮದ ಸಮಗ್ರ ತಿಳಿವಳಿಕೆಯಿಂದಲೇ ಅದರ ಫಲ ದೊರೆಯುತ್ತದೆ. ಇದರಿಂದಲೇ ಸಮಷ್ಟಿಫಲವೂ ದೊರೆಯುತ್ತದೆ, ವ್ಯಷ್ಟಿಫಲವೂ ದೊರೆಯುತ್ತದೆ. ಕರ್ಮವೆಲ್ಲವೂ ಸಂಸಾರಕ್ಕೆ ಕಾರಣವೆಂಬ ಸತ್ಯವನ್ನು ಮನಗಾಣಿಸಲು ಬ್ರಹ್ಮವಿದ್ಯೆ ಪ್ರವೃತ್ತವಾಗಿದೆ. ಆದ್ದರಿಂದ **ಮೂರ್ತಾಮೂರ್ತ ತದ್ವಾಸನಾತ್ಮಕಃ ಸಂಸಾರಃ** – ಸಂಸಾರವು ಮೂರ್ತ ಹಾಗೂ ಅಮೂರ್ತಗಳ ಮತ್ತು ಅವುಗಳಿಂದ ಉಂಟಾಗುವ ವಿಕಾರವಾಗಿದೆ.

ಮೃತ್ಯುಂಜಯರಾಗುವ ಸಾಹಸಿಗಳಿಗೆ ಇಲ್ಲಿದೆ ಮಾರ್ಗದರ್ಶನ. ಮೃತ್ಯುವನ್ನು ಬೆನ್ನಟ್ಟದೇ ಮೃತ್ಯುವನ್ನು ಜಯಿಸಲು ಸಾಧ್ಯವಿಲ್ಲ. ಜಯಿಸಬೇಕಾದ ಮೃತ್ಯುವನ್ನು ಈ ಉಪನಿಷತ್ತಿನಲ್ಲಿ **'ಅಶನಾಯಾ'** ಎಂದು ಗುರುತಿಸಿದೆ. ಅಶನಾಯಾ ಎಂದರೆ **ಅಶಿತುಮ್ ಇಚ್ಛಾ**– ತಿನ್ನಬೇಕೆಂಬ ಇಚ್ಛೆ, ಈ ಇಚ್ಛೆಯ ಫಲವಾಗಿ, ಇಚ್ಛೆಯುಳ್ಳವರನ್ನೆಲ್ಲ ಕೊಲ್ಲುವುದರಿಂದ, ಅಂದರೆ ತಿನ್ನಲು ಬಯಸುವುದರಿಂದ ಮೃತ್ಯು ವನ್ನು 'ಅಶನಾಯಾ' ಎಂದು ಗುರುತಿಸಲಾಗಿದೆ. ಮೃತ್ಯುವಿನ ಕೃತ್ಯ ಭಯಂಕರ. ಮೃತ್ಯುವು ಮೊದಲು ಸಂಕಲ್ಪ ವಿಕಲ್ಪಾತ್ಮಕವಾದ ಮನಸ್ಸನ್ನು ಸೃಷ್ಟಿಸಿತು. ಹೀಗೆ ಅಭಿವ್ಯಕ್ತವಾದ ಮನಸ್ಸು ಮೊದಲು ಆತ್ಮನನ್ನೇ ಅರ್ಚಿಸಿತು. ಇದರಿಂದ ರಸಾತ್ಮಕವಾದ ನೀರು ಉತ್ಪನ್ನವಾಯಿತು. ನೀರಿನಲ್ಲಿ ಘನೀಭೂತವಾದ ಘಟಕಗಳ ಸಂಘಾತವಾಯಿತು. **ಆಸು ಚ ಅಗ್ನಿಃ ಪ್ರತಿಷ್ಠಿತಃ** – ಈ ನೀರಿನಲ್ಲಿ ಅಗ್ನಿ ಅಡಗಿದೆ. ಈ ಅಗ್ನಿಯಿಂದಲೇ ಎಲ್ಲ ಜನ್ಯವಸ್ತುಗಳ ಒಳಹೊರಗಿನ ಪಾಕ ಪ್ರಾರಂಭವಾಯಿತು. ನೀರಿನಲ್ಲಿ ಯಾವ ಘನೀಭೂತವಾದ ಘಟಕವಿದೆಯೋ ಅದೇ ಭೂಮಿ. ಭೂಮಿಯನ್ನು ಸೃಷ್ಟಿಸಲು ಪ್ರಜಾಪತಿಗೆ ಅತ್ಯಂತ ಶ್ರಮವಾಯಿತು. ಇದರಿಂದ ಅವನ ಶರೀರದಿಂದ ಬೆವರು ಸುರಿಯಿತು. ಈ ಬೆವರೇ ಅಗ್ನಿ. ಇದೇ ಮೊಟ್ಟಮೊದಲ ಶರೀರಿ. ಪ್ರಜಾಪತಿಯು ತಾನೇ ತನ್ನ ಶರೀರವನ್ನು ಆದಿತ್ಯ, ವಾಯು, ಪ್ರಾಣವೆಂದು ಮೂರು ತೆರನಾಗಿ ವಿಭಾಗಿಸುತ್ತಾನೆ. ಆತ್ಮನನ್ನೇ ಪಶುವೆಂದು ಭಾವಿಸಿ ಅದನ್ನು ನಿರ್ಬಂಧಿಸದೇ ಸ್ವೇಚ್ಛೆಯಿಂದ ವರ್ತಿಸಲು ಬಿಡಬೇಕೆಂದು ಯೋಚಿಸುತ್ತಾನೆ. ಒಂದು ವರ್ಷ ಪೂರ್ತಿ ಮುಗಿದ ನಂತರ ತನಗಾಗಿ ಆತ್ಮಪಶುವನ್ನೇ ಬಲಿಕೊಡುತ್ತಾನೆ. ಈ ಯಾಗದಲ್ಲಿ ಸೂರ್ಯನೇ ಅಶ್ವಮೇಧ. ಇದರ ಫಲ ಸಂವತ್ಸರ.

ಇಲ್ಲಿ ಬಳಕೆಯಾಗುವ ಎಲ್ಲಾ ಸಾಧನಗಳೂ ಹಾಗೂ ಅವುಗಳ ಮೂಲಕ ಪೂಜಿತನಾಗುವವನು ಕೂಡ ಸುಖಪ್ರದರೇ ಆಗಿದ್ದಾರೆ. ಆದುದರಿಂದ 'ಅರ್ಚತೇ ಕಂ' ಎಂಬ ವಿವರಣೆಯ ಪ್ರಕಾರ, ಸುಖವನ್ನು ಕೊಡುವ ಸಂಗತಿಗಳೇ **'ಅರ್ಕ'**ಗಳು. ಈ ಅರ್ಕಗಳ ದೃಢವಾದ ನಿಶ್ಚಯದ ಮೂಲಕ **(ಕ್ರತು)** ನಡೆಯುವ ಎಲ್ಲ ಕ್ರಿಯೆಗಳನ್ನೂ **'ಚಿತಿ'** ಎಂದು ಕರೆಯುತ್ತಾರೆ. ಈ ಬಗೆಯ ಚಿತಿ ಯಿಂದಲೇ ಮನುಷ್ಯ, ಪಿತೃ, ದೇವ ಎಂಬ ಮೂರು ಲೋಕ ಗಳೂ ಹುಟ್ಟುತ್ತವೆ. ಈ ಮೂರು ಲೋಕಗಳೂ ಆತ್ಮನ ಶರೀರದ ಅವಯವಗಳೇ ಆಗಿವೆ.

ಅರ್ಕ ಮತ್ತು ಆದಿತ್ಯ – ಇವೆರಡೂ ಅಶ್ವಮೇಧ ಯಜ್ಞದ ಫಲಗಳು. ಪಾರ್ಥಿವಾಗ್ನಿಯೇ ಅರ್ಕ. ಇದು ಸಾಕ್ಷಾತ್ ಯಜ್ಞ ಸ್ವರೂಪ. ಆದ್ದರಿಂದ ಕ್ರಿಯಾತ್ಮಕವಾದುದು. ಯಜ್ಞಫಲವೇ ಆದಿತ್ಯ. ಸಾಧ್ಯ ಸಾಧನರೂಪವಾದ ಅಗ್ನಿ ಮತ್ತು ಆದಿತ್ಯರು ಬೇರೆ ಬೇರೆಯಲ್ಲ, ಒಂದೇ. ಅದೇ ಮೃತ್ಯು. ಹೀಗೆ ಅಶ್ವಮೇಧವೇ ಮೃತ್ಯು. ಇದಕ್ಕೆ ಒಂದೇ ದೇವತೆ. 'ನಾನೇ ಮೃತ್ಯು' ಎಂದು ಬಗೆದ ಅಗ್ನಿ, ಆದಿತ್ಯರನ್ನು ಸಾಧ್ಯ–ಸಾಧನವೆಂದು ಭಾವಿಸಿಕೊಂಡರೆ ಜೀವಿಗಳಿಗೆ ಪುನರ್ಮರಣವಿಲ್ಲ. ಹೀಗೆ ಭಾವಿಸಿದರೆ ಮೃತ್ಯುವೇ ಮೃತ್ಯುವಿಗೆ ತುತ್ತಾಗಿ, ಅಂದರೆ 'ಅಶನ' ವಾಗಿ ಆತ್ಮನಾಗುತ್ತಾನೆ. ಹೀಗೆ ಮೃತ್ಯುವಿಗೆ ಮೃತ್ಯು ಅಡರಿ ಮೃತ್ಯುಂಜಯನಾಗುತ್ತಾನೆ ಎಂಬುದೇ ಉಪನಿಷತ್ತಿನ ಸಂದೇಶ.

ಮೃತ್ಯುವೇ ಆತ್ಮ ಎಂಬ ಭಾವೋದಯವೇ ಅಶ್ವಮೇಧ ಯಾಗದ ಧ್ಯೇಯ. ಈ ಭಾವಸಂಪತ್ತಿಗಾಗಿ ಕರ್ಮ, ಜ್ಞಾನ ಇವೆರಡೂ ಅನಿವಾರ್ಯ. ಅಂಥ ಕರ್ಮಜ್ಞಾನ ಪ್ರಾಪ್ತಿ ಹೇಗೆ? ಕರ್ಮಗಳಲ್ಲಿ ಜಪವೂ ಒಂದು. ಪ್ರಾಣವಿಜ್ಞಾನವನ್ನು ಪಡೆದವನು ಸಫಲವಾದ ಜಪಕ್ಕೆ ಅರ್ಹನಾಗುತ್ತಾನೆ. ಜಪದ ಫಲವೇ ದೇವ ಭಾವದತ್ತ ಏರುವುದು. ದಿವ್ಯಭಾವೋದಯಕ್ಕಾಗಿ ಮೂರು ಯಜುರ್ಮಂತ್ರಗಳನ್ನು ಜಪಕ್ಕಾಗಿ ವಿಧಿಸಲಾಗಿದೆ.

**೧. ಅಸತೋ ಮಾ ಸದ್ಗಮಯ**

**– ಅಸತ್ತಿನಿಂದ ನನ್ನನ್ನು ಸತ್ತಿನೆಡೆಗೆ ತಲುಪಿಸು**

**೨. ತಮಸೋ ಮಾ ಜ್ಯೋತಿರ್ಗಮಯ**

**– ಕತ್ತಲಿನಿಂದ ಬೆಳಕಿಗೆ ತಲುಪಿಸು**

**೩. ಮೃತ್ಯೋರ್ಮಾ ಅಮೃತಂ ಗಮಯ**

**– ಮೃತ್ಯುವಿನಿಂದ ಅಮರತೆಗೆ ತಲುಪಿಸು**

ಈ ಮೂರು ಮಂತ್ರಗಳ ಜಪದಿಂದ ವ್ಯಕ್ತಿಯು ದೇವಭಾವದತ್ತ